ಇ) ಹಂಚಿಕೆಯಾಗಿರುವ ನಿವೇಶನಗಳನ್ನು ಫಲಾನುಭವಿಗಳಿಗೆ ನೀಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಚಿಕ್ಕಬಳ್ಳಾಪುರ ನಗರ ಸಭೆಯ ವ್ಯಾಪ್ತಿಯಲ್ಲಿ ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ನಿರ್ಮಿಸಲಾದ ನಿವೇಶನಗಳ ಪೈಕಿ ಮೂಲೆ ನಿವೇಶನಗಳನ್ನು ಮಾತ್ರ ನಿಯಮಾನುಸಾರ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗಿದೆ. ಉಳಿದ ನಿವೇಶನಗಳನ್ನು ಹಂಚಿಕೆ ಮಾಡಲು ಅರ್ಜಿ ಅಹ್ವಾನಿಸಿದ್ದು ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಈ ಪೈಕಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೂ ಸಹ ಶೇ.18 ರಷ್ಟು ನಿವೇಶನಗಳನ್ನು ವಿತರಿಸುವ ಬಗ್ಗೆ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಆ) ಮೇಲಿನಂತೆ.

ಇ) ಉದ್ಭವಿಸುವುದಿಲ್ಲ.

733(1136) ಶ್ರೀ ಮುನಿಯಪ್ಪ ಎಸ್.ಎಂ. (ಚಿಕ್ಕಬಳ್ಳಾಪುರ ಕ್ಷೇತ್ರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಈ ಹಿಂದೆ ಇದ್ದ ಗ್ಯಾಂಗ್‌ಮನ್‌ಗಳನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಂಡಿರುವುದರಿಂದ ರಸ್ತೆಗಳ ದುರಸ್ತಿ ಕಾರ್ಯ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಸರ್ಕಾರ ಪುನಃ ಸದರಿಯವರನ್ನು ತೆಗೆದುಕೊಳ್ಳುವ ಯೋಜನೆಯನ್ನು ಹೊಂದಿದೆಯೇ;

ಆ) ಹಾಗಿದ್ದಲ್ಲಿ ಆದಷ್ಟು ಬೇಗ ಗ್ಯಾಂಗ್‌ಮನ್‌ಗಳನ್ನು ನೇಮಕ ಮಾಡಿ ರಸ್ತೆಗಳ ದುರಸ್ತಿಯ ಬಗ್ಗೆ ಗಮನ ಹರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಲೋಕೋಪಯೋಗಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಗ್ಯಾಂಗ್‌ಮನ್ ಹುದ್ದೆಗಳು ಇಲ್ಲದೇ ಇರುವುದರಿಂದ ಈ ಇಲಾಖೆಯಲ್ಲಿ ಈ ಹಿಂದೆ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ತದನಂತರ ಸೂಪರ್‌ನ್ಯೂಮರರಿ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರ ಪೈಕಿ ಕೆಲವು ಗ್ಯಾಂಗ್‌ಮನ್‌ಗಳನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಅವರುಗಳ ವ್ಯಾಪ್ತಿಯಲ್ಲಿ ಖಾಲಿ ಇರುವ ಗ್ರೂಪ್-ಡಿ ಹುದ್ದೆಗಳಿಗೆ ಮರುವಿನ್ಯಾಸಗೊಳಿಸಿರುತ್ತಾರೆ. ಇನ್ನುಳಿದವರ ಪೈಕಿ ಕೆಲವರು ನಿವೃತ್ತಿಗೊಂಡಿದ್ದು ಉಳಿದ ಸೂಪರ್‌ನ್ಯೂಮರರಿ ಗ್ಯಾಂಗ್‌ಮನ್‌ಗಳ ಸೇವೆಯನ್ನು ಪಡೆದುಕೊಂಡು ರಸ್ತೆಗಳನ್ನು ದುರಸ್ತಿ ಪಡಿಸಲಾಗುತ್ತಿದೆ. ಗ್ಯಾಂಗ್‌ಮನ್ ಸಿಬ್ಬಂದಿ ಇಲ್ಲದ ಕಡೆಗಳಲ್ಲಿ ರಸ್ತೆ ದುರಸ್ತಿ

ಕೆಲಸಗಳನ್ನು ಟೆಂಡರ್ ಹಾಗೂ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡು ನಿರ್ವಹಿಸಲಾಗುತ್ತಿದೆ. ಯಾವುದೇ ರಸ್ತೆ ದುರಸ್ಥಿ ಕಾಮಗಾರಿ ಸ್ಥಿಗಿತಗೊಂಡಿರುವುದಿಲ್ಲ. ಗ್ಯಾಂಗ್‌ಮನ್‌ಗಳನ್ನು ತೆಗೆದುಹಾಕಿರುವ ಪ್ರಕರಣಗಳು ಇಲ್ಲದಿರುವುದರಿಂದ ಪುನಃ ಅವರುಗಳನ್ನು ನೇಮಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ರಸ್ತೆ ದುರಸ್ತಿ ಕೆಲಸಗಳನ್ನು ಹಾಲಿ ಕೆಲಸ ನಿರ್ವಹಿಸುತ್ತಿರುವ ಗ್ಯಾಂಗ್‌ಮನ್ ಸಿಬ್ಬಂದಿಗಳಿಂದ, ಟೆಂಡರ್ ಹಾಗೂ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡು ನಿರ್ವಹಿಸಲಾಗುತ್ತಿರುವುದರಿಂದ ರಸ್ತೆ ದುರಸ್ತಿ ಕೆಲಸ ಸ್ಥಗಿತಗೊಂಡಿಲ್ಲದ ಕಾರಣ ಈ ಕೆಲಸಕ್ಕೆ ಗ್ಯಾಂಗ್‌ಮನ್‌ಗಳನ್ನು ಹೊಸದಾಗಿ ನೇಮಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

734(1137) ಶ್ರೀ ಮುನಿಯಪ್ಪ ಎಸ್.ಎಂ. (ಚಿಕ್ಕಬಳ್ಳಾಪುರ) : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂದಿ, ಚಿಕ್ಕಬಳ್ಳಾಪುರ ಕ್ಷೇತ್ರದ ಪ್ರವಾಸಿ ಕೇಂದ್ರವಾಗಿದ್ದು, ಸಾವಿರಾರು ಪ್ರವಾಸಿಗರು ವೀಕ್ಷಣೆಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಂದಿ ಗ್ರಾಮದಲ್ಲಿ ಪೋಲೀಸ್ ಠಾಣೆ ಮತ್ತು ಪೋಲೀಸ್ ವಸತಿ ಗೃಹಗಳ ನಿರ್ಮಾಣಕ್ಕೆ ಅವಶ್ಯಕವಾದ ನಿವೇಶನ ಕಾಯ್ದಿರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಲಭ್ಯವಿರುವ ಕಾಯ್ದಿರಿಸುವ ನಿವೇಶನದಲ್ಲಿ ಹೊಸದಾಗಿ ಪೋಲೀಸ್ ಠಾಣೆ ಹಾಗೂ ಪೋಲೀಸ್ ವಸತಿ ಗೃಹ ನಿರ್ಮಾಣದ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಹೌದು.

ಆ) ಹೌದು. ಸದರಿ ಗ್ರಾಮದಲ್ಲಿ ಸರ್ವೆ ನಂ.232, 233, 210/1, 210/2ಗಳಲ್ಲಿ ಒಟ್ಟು 2.1 ಎಕರೆ ಜಮೀನು ಇಲಾಖೆ ವಶದಲ್ಲಿರುತ್ತದೆ.

ಇ) ನಂದಿ ಗ್ರಾಮದ ಪೋಲೀಸ್ ಹೊರಠಾಣೆಯ ಕಟ್ಟಡ, ಹೆಚ್.ಸಿ–01, ಪಿ.ಸಿ.–04ಗಳ ವಸತಿ ಗೃಹಗಳನ್ನು ನಿರ್ಮಿಸುವ ಬಗ್ಗೆ 2006–07ನೇ ಸಾಲಿನ ಇಲಾಖೆಯ ಕಾರ್ಯಯೋಜನೆ ಯಡಿಯಲ್ಲಿ ಸಿದ್ಧಪಡಿಸಲಾಗಿದೆ. ಸರ್ಕಾರದಿಂದ ಮುಂಬರುವ ವರ್ಷಗಳಲ್ಲಿ ದೊರಕುವ ಅನುದಾನದ ಅಭ್ಯತೆಯ ಮೇರೆಗೆ ಈ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.